# ರಕ್ಷಿಸುವವರೇ ನಿಷ್ಕ್ರಿಯರಾದರೆ..?

ಅಪಹರಣ ಪ್ರಕರಣಗಳನ್ನು ಪತ್ತೆ ಹಚ್ಚುವ ವಿಷಯದಲ್ಲಿ ಪೊಲೀಸರು ಹೆಚ್ಚು ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಬೇಕು ಎನ್ನುವುದು ಸಮಾಜದ ನಿರೀಕ್ಷೆ. ಆರೋಪಿಗಳನ್ನು ತಕ್ಷಣವೇ ಪತ್ತೆ ಹಚ್ಚಿ ಅವರಿಗೆ ಶಿಕ್ಷೆ ಆಗುವಂತೆ ಪೊಲೀಸರು ನೋಡಿಕೊಳ್ಳಬೇಕು ಎಂದು ಜನರು ಅಪೇಕ್ಷಿಸುತ್ತಾರೆ. ದುರದೃಷ್ಟದ ಸಂಗತಿ ಎಂದರೆ ಜನರ ನಿರೀಕ್ಷೆ, ಅಪೇಕ್ಷೆಗಳು ಬಹುತೇಕ ಸಂದರ್ಭಗಳಲ್ಲಿ ಹುಸಿಯಾಗಿವೆ. ಪೊಲೀಸರೇ ಅಪಹರಣಕಾರರ ಜತೆಯಲ್ಲಿ ಕೈಜೋಡಿಸಿ ಅಕ್ರಮಗಳಿಗೆ ಅವಕಾಶ ಮಾಡಿಕೊಟ್ಟ ಹಲವು ಉದಾಹರಣೆಗಳಿವೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯ ಬಾಲಕಿಯೊಬ್ಬಳ ಅಪಹರಣ ಪ್ರಕರಣದಲ್ಲಿ ಇದು ಮತ್ತೊಮ್ಮೆ ಸಾಬೀತಾಗಿದೆ. ಆದರೆ ಈ ಪ್ರಕರಣದ ಬಗ್ಗೆ  ವಿಚಾರಣೆ ನಡೆಸಿದ ಹೈಕೋರ್ಟಿನ ವಿಭಾಗೀಯ ಪೀಠದ ನ್ಯಾಯಮೂರ್ತಿಗಳು ದೇವನಹಳ್ಳಿ ಪೊಲೀಸರ ಕಾರ್ಯವೈಖರಿ ಬಗ್ಗೆ ವ್ಯಕ್ತಪಡಿಸಿರುವ ಅಭಿಪ್ರಾಯಗಳು ಇಲಾಖೆಯ ಒಟ್ಟಾರೆ ನಿಷ್ಕ್ರಿಯತೆಗೆ ಕನ್ನಡಿ ಹಿಡಿಯುತ್ತವೆ. ಪೊಲೀಸರು ಬಗ್ಗೆ ನಮ್ಮ ಜನರಿಗೆ ಇರುವ ವಿಶ್ವಾಸಾರ್ಹತೆಯನ್ನು ಕುಗ್ಗಿಸಿದ ಪ್ರಕರಣ ಇದು.

ಅಪಹರಣಕ್ಕೆ ಒಳಗಾದ ಬಾಲಕಿಯನ್ನು ಪತ್ತೆ ಹಚ್ಚುವ ವಿಷಯದಲ್ಲಿ ದೇವನಹಳ್ಳಿ ಪೊಲೀಸರು ಮೊದಲು ಕನಿಷ್ಠ ಆಸಕ್ತಿಯನ್ನೂ ತೋರಿಸಲಿಲ್ಲ. ಬಾಲಕಿಯ ತಂದೆ ಹೈಕೋರ್ಟಿಗೆ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದ ನಂತರವೂ ಎಚ್ಚೆತ್ತುಕೊಳ್ಳಲಿಲ್ಲ. ಬಾಲಕಿಯನ್ನು ಪತ್ತೆ ಮಾಡುವಂತೆ ಹೈಕೋರ್ಟ್ ಹಲವು ಸಲ ಆದೇಶ ಮಾಡಬೇಕಾಯಿತು. ಕೊನೆಗೂ ಬಾಲಕಿಯನ್ನು ಪತ್ತೆ ಹಚ್ಚಿದ ಪೊಲೀಸರು ಅಪಹರಣಕಾರನನ್ನು ರಕ್ಷಿಸಲು ಮುಂದಾಗಿ ಕೋರ್ಟಿಗೆ ವ್ಯತಿರಿಕ್ತ ಹೇಳಿಕೆ ನೀಡುವ ಮಟ್ಟಕ್ಕೆ ಹೋದದ್ದು ಅತ್ಯಂತ ನಾಚಿಕೆಗೇಡಿನ ವರ್ತನೆ. ಅಪಹರಣಕಾರನನ್ನು ಪೊಲೀಸರು ರಕ್ಷಿಸುತ್ತಾರೆ ಎಂದರೆ ಅವನು ಎಷ್ಟು ಪ್ರಭಾವಿ ಇರಬಹುದು? ಅಥವಾ ಪ್ರಕರಣ ಮುಚ್ಚಿ ಹಾಕಲು ಪೊಲೀಸರಿಗೆ ಅವನು ತೋರಿಸಿದ 'ಆಮಿಷ' ಎಂಥದ್ದಿರಬಹುದು? ಅಪರಾಧಿಯನ್ನು ಪೊಲೀಸರು ರಕ್ಷಿಸಿದರು ಎನ್ನುವುದು ಬಹಿರಂಗವಾದರೆ ಇಲಾಖೆಯ ಮರ್ಯಾದೆ ಮೂರುಕಾಸಿಗೆ ಹರಾಜಾದೀತು ಎಂಬ ಕನಿಷ್ಠ ಎಚ್ಚರವೂ ಇಲ್ಲದಂತೆ ದೇವನಹಳ್ಳಿ ಪೊಲೀಸರು ವರ್ತಿಸಿದ್ದಾರೆ. ಬಾಲಕಿಯ ಮೇಲೆ ನಡೆದ ಅತ್ಯಾಚಾರದ  ಕುರುಹುಗಳನ್ನು ನಾಶ ಮಾಡಲು ಪೊಲೀಸರು ಸಹಕರಿಸಿದ್ದಂತೂ ಅಕ್ಷಮ್ಯ. ನ್ಯಾಯಮೂರ್ತಿಗಳು ಅವರನ್ನು 'ಲಜ್ಜೆಗೆಟ್ಟವರು' ಎಂದು ಕರೆದು ಛೀಮಾರಿ ಹಾಕಿದ್ದಾರೆ. 'ಈ ಲಜ್ಜೆಗೆಟ್ಟವರನ್ನು ಕೆಲಸದಿಂದ ತೆಗೆದು ಹಾಕಿ' ಎಂದು ಪೊಲೀಸ್ ಆಯುಕ್ತರಿಗೆ ಸೂಚನೆ ನೀಡಿದ್ದಾರೆ. ಲಜ್ಜೆಗೆಟ್ಟ ಪೊಲೀಸರ ಮೇಲೆ ಆಯುಕ್ತರು ಯಾವ ಕ್ರಮ ತೆಗೆದುಕೊಳ್ಳುತ್ತಾರೆ ಎಂಬುದನ್ನು ಕಾದು ನೋಡಬೇಕು. ಇಲಾಖೆಯ ಗೌರವಕ್ಕೆ ಮಸಿಬಳಿದ ದೇವನಹಳ್ಳಿ ಪೊಲೀಸರ ರಕ್ಷಣೆಗೆ ಯಾರೇ ಮುಂದಾದರೂ ಅವರನ್ನೂ ಲಜ್ಜೆಗೆಟ್ಟವರು ಎಂದು ಜನರು ಭಾವಿಸುವ ಸಾಧ್ಯತೆ ಇದೆ ಎಂಬುದನ್ನು ಪೊಲೀಸ್ ಇಲಾಖೆ ಮತ್ತು ಸರ್ಕಾರ ಗಮನದಲ್ಲಿ ಇಟ್ಟುಕೊಳ್ಳಬೇಕು.

ಪೊಲೀಸ್ ಇಲಾಖೆಯಲ್ಲಿರುವವರೆಲ್ಲ ದೇವನಹಳ್ಳಿ ಪೊಲೀಸರಂಥವರು ಎಂದು ಹೇಳಲಾಗದು. ಆದರೆ ಇಲಾಖೆಯಲ್ಲಿ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ. ಜಾತೀಯತೆ ಮಿತಿ ಮೀರಿದೆ. ಒಟ್ಟಾರೆ ಇಲಾಖೆಯ ವರ್ಚಸ್ಸಿಗೆ ಚ್ಯುತಿ ಬಂದಿದೆ. ಇಲಾಖೆಯಲ್ಲಿರುವ ದಕ್ಷ ಹಾಗೂ ಪ್ರಾಮಾಣಿಕರ ಕೆಲಸಗಳನ್ನೆಲ್ಲ ಮಣ್ಣುಗೂಡಿಸುವಂತಹ ಬೆಳವಣಿಗೆಗೆ ಯಾರೂ ಅವಕಾಶ ಮಾಡಿಕೊಡಬಾರದು. ಇಡೀ ಇಲಾಖೆ ಅನ್ಯಾಯ, ಅಕ್ರಮಗಳ ಪರವಾಗಿ ಕೆಲಸ ಮಾಡುತ್ತದೆ ಎಂಬ ಭಾವನೆ ಜನರಲ್ಲಿ ಬೆಳೆಯಲು ಅವಕಾಶ ಕೊಡಬಾರದು. ಮಕ್ಕಳು, ಮಹಿಳೆಯರು, ಸಮಾಜದ ದುರ್ಬಲರು ಅನ್ಯಾಯಕ್ಕೆ ಒಳಗಾದ ಸಂದರ್ಭಗಳಲ್ಲೂ ಪೊಲೀಸರು ಕಾರ್ಯ ಪ್ರವೃತ್ತರಾಗದಿದ್ದರೆ ಇಲಾಖೆಯ ಅಸ್ತಿತ್ವಕ್ಕೆ ಅರ್ಥವೇ ಇರುವುದಿಲ್ಲ. 'ಪೊಲೀಸರ ಬಳಿ ಹೋದರೆ ನ್ಯಾಯ ಸಿಗುತ್ತದೆ. ದುರ್ಬಲರಿಗೆ ಅವರು ರಕ್ಷಣೆ ಕೊಡುತ್ತಾರೆ' ಎಂಬ ಸಾರ್ವಜನಿಕರ ನಂಬಿಕೆಯನ್ನು ಉಳಿಸಿಕೊಳ್ಳುವ ಅಗತ್ಯವನ್ನು ಪೊಲೀಸ್ ಇಲಾಖೆ ಇನ್ನಾದರೂ ಮನಗಾಣಬೇಕು.

ಇತ್ತೀಚಿನ ವರ್ಷಗಳಲ್ಲಿ ಪೊಲೀಸ್ ಇಲಾಖೆಯಲ್ಲಿ ರಾಜಕೀಯ ಹಸ್ತಕ್ಷೇಪ ಹೆಚ್ಚುತ್ತಿದೆ. ಪೊಲೀಸರನ್ನು ಬಳಸಿಕೊಂಡು ರಾಜಕೀಯ ವಿರೋಧಿಗಳನ್ನು ಬಗ್ಗು ಬಡಿಯುವ ಪ್ರಯತ್ನಗಳು ನಡೆಯುತ್ತಿವೆ. ಚುನಾವಣಾ ಅಕ್ರಮಗಳಿಗೆ ಅವರನ್ನು ಬಳಸಿಕೊಳ್ಳಲಾಗುತ್ತಿದೆ. ಹಣವಂತರು ಪೊಲೀಸರ ಹಾದಿ ತಪ್ಪಿಸುತ್ತಲೇ ಇದ್ದಾರೆ. ಅಂತಹ ಪೊಲೀಸರು ಯಾರು ಎನ್ನುವುದು ಜನರಿಗೆ ಗೊತ್ತಿದೆ. ಈ ಬೆಳವಣಿಗೆಗಳನ್ನು ನ್ಯಾಯಾಂಗ ವ್ಯವಸ್ಥೆ ಹಾಗೂ ಸಮಾಜ ನೋಡುತ್ತಿದೆ ಎನ್ನುವ ಎಚ್ಚರ ಪೊಲೀಸರಿಗೆ ಇರಬೇಕು. ಇಲಾಖೆಯ ಗೌರವನ್ನು ಎತ್ತಿ ಹಿಡಿಯುವ ಕೆಲಸವನ್ನು ಪ್ರತಿಯೊಬ್ಬ ಪೊಲೀಸ್ ಸಿಬ್ಬಂದಿಯೂ ಮಾಡಬೇಕು. ಜನ ಅದನ್ನು ಬಯಸುತ್ತಾರೆ.

■ ಪ್ರೇಮಕುಮಾರ್ ಹರಿಯಬ್ಬೆ

ಪೊಲೀಸ್ ಇಲಾಖೆಯಲ್ಲಿ ರಾಜಕೀಯ ಹಸ್ತಕ್ಷೇಪ ಹೆಚ್ಚುತ್ತಿದೆ. ಪೊಲೀಸರನ್ನು ಬಳಸಿಕೊಂಡು ರಾಜಕೀಯ ವಿರೋಧಿಗಳನ್ನು ಬಗ್ಗು ಬಡಿಯುವ ಪ್ರಯತ್ನಗಳು ನಡೆಯುತ್ತಿವೆ. ಚುನಾವಣಾ ಅಕ್ರಮಗಳಿಗೆ ಅವರನ್ನು ಬಳಸಿಕೊಳ್ಳಲಾಗುತ್ತಿದೆ. ಹಣವಂತರು ಪೊಲೀಸರ ಹಾದಿ ತಪ್ಪಿಸುತ್ತಲೇ ಇದ್ದಾರೆ. ಅಂತಹ ಪೊಲೀಸರು ಯಾರು ಎನ್ನುವುದು ಜನರಿಗೆ ಗೊತ್ತಿದೆ. ಈ ಬೆಳವಣಿಗೆಗಳನ್ನು ನ್ಯಾಯಾಂಗ ವ್ಯವಸ್ಥೆ ಹಾಗೂ ಸಮಾಜ ನೋಡುತ್ತಿದೆ ಎನ್ನುವ ಎಚ್ಚರ ಪೊಲೀಸರಿಗೆ ಇರಬೇಕು.

